141

**ಮಾನ್ಯ ವಿಧಾನ ಪರಿಷತ್ತ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:** ಮೈಸೂರಿನ ಟಿ.ನರಸೀಪುರ ಪಟ್ಟಣ ಶ್ರೀರಾಂಪುರ ಕಾಲೋನಿಯ ನಿವಾಸಿ ಯುವಬ್ರಿಗೇಡ್ ಕಾರ್ಯಕರ್ತ 32 ವರ್ಷದ ವೇಣುಗೋಪಾಲ್ ನಾಯಕ್ ಅವರನ್ನು ಚಾಟಿಯಿಂದ ಇರಿದು ಕೊಲೆ ಮಾಡಲಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಬಗ್ಗೆ ಸರ್ಕಾರದ ಗಮನದಲ್ಲಿ ಇದೆಯೇ? ಇದರಿಂದ ಹಿಂದೂಪರ ಕಾರ್ಯಕರ್ತರಿಗೆ ಭದ್ರತೆ ಇಲ್ಲದಂತಾಗಿದೆ. ಸಮಾಜದಲ್ಲಿ ಅಭದ್ರತೆಯ ವಾತಾವರಣ ಸೃಷ್ಟಿಯಾಗಿದೆ. ಆದ್ದರಿಂದ ವೇಣುಗೋಪಾಲ್ ನಾಯಕ್ ಅವರನ್ನು ಕೊಲೆ ಮಾಡಿದ ಅಪರಾಧಿಗಳನ್ನು ತಕ್ಷಣ ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಆ ಮೂಲಕ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕೆಂಬುದರ ಬಗ್ಗೆ.

**ಉತ್ತರ:**

ದಿನಾಂಕ: 09.07.2023 ರಂದು ರಾತ್ರಿ 11.00 ಗಂಟೆಗೆ ಪಿರ್ಯಾದಿ ರಾಮಾನುಜಂ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ "ದಿನಾಂಕ:08.07.2022 ರಂದು ಹನುಮ ಜಯಂತಿ ಪ್ರಯುಕ್ತ ಮದ್ಯಾಹ್ನ 1.00 ಗಂಟೆ ಸಮಯದಲ್ಲಿ ಉತ್ಸವ ಹೊರಡುವ ಗುಂಜನರಸಿಂಹಸ್ವಾಮಿ ದೇವಾಲಯದ ಮುಖ್ಯದ್ವಾರದ ಬಳಿ ಉತ್ಸವ ಮೂರ್ತಿಗಳನ್ನು ಮೆರವಣಿಗೆಗೆ ಸಿದ್ಧಪಡಿಸಿದ್ದರು. ಸಾರ್ವಜನಿಕರು ಮತ್ತು ಭಕ್ತಾದಿಗಳು ದೇವಾಲಯದ ಆವರಣದಲ್ಲಿ ಇದ್ದುದರಿಂದ ದೇವಾಲಯದ ಆವರಣಕ್ಕೆ ವಾಹನಗಳನ್ನು ಬಿಡದಂತೆ ಹೊರಗೆ ನಿಲ್ಲಿಸುವಂತೆ ಪಿರ್ಯಾದಿ ರಾಮಾನುಜಂ ಮತ್ತು ಸಮಿತಿಯ ಸದಸ್ಯರುಗಳು ಸೂಚಿಸುತ್ತಿದ್ದರು. ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಶ್ರೀರಾಂಪುರದ ಮಣಿಕಂಠ, ತಿರುಮಕೂಡಲಿನ ಸಂದೇಶ್ ರವರುಗಳು ಬೈಕ್‌ನಲ್ಲಿ ದೇವಾಲಯದ ಮುಖ್ಯದ್ವಾರದಿಂದ ಒಳಗೆ ಬರುತ್ತಿದ್ದು, ಪಿರ್ಯಾದಿ ರಾಮಾನುಜಂ ಮತ್ತು ಕಾರ್ಯಕರ್ತರು ಉತ್ಸವ ಮೂರ್ತಿ ಹೊರಗೆ ಹೋಗುವವರೆಗೆ ಯಾವುದೇ ವಾಹನಗಳು ಒಳಗಡೆ ಹೋಗುವುದು ಬೇಡ. ಬೈಕ್‌ಗಳನ್ನು ದೇವಾಲಯದ ಹೊರಗೆ ನಿಲ್ಲಿಸಿ ಎಂದು ಹೇಳಿದರು. ಈ ಕಾರಣಕ್ಕೆ ಕೋಪಗೊಂಡ ಸಂದೇಶ್ ಮತ್ತು ಮಣಿಕಂಠ ರವರು ನಮ್ಮ ಬೈಕ್‌ಗಳನ್ನು ಒಳಗೆ ಬಿಡುತ್ತಿಲ್ಲ. ನೀನು ಅದು ಹೇಗೆ ಹನುಮೋತ್ಸವ ಮಾಡುತ್ತೀರ, ಉತ್ಸವವನ್ನು ಹೇಗೆ ನಿಲ್ಲಿಸಬೇಕೆಂದು ಗೊತ್ತು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ರಾಮಾನುಜಂ ಮತ್ತು ವೇಣುಗೋಪಾಲ ಎಂಬುವರು ಇದು ದೇವರ ಉತ್ಸವ ಗಲಾಟೆ ಬೇಡವೆಂದು ಹೇಳಿದಾಗ ಅಷ್ಟರಲ್ಲಿ ಜನರು ಗುಂಪುಗೂಡಿದ್ದು, ಉತ್ಸವ ಮುಗಿಯಲಿ ನಾಳೆ ನಿನ್ನನ್ನು ಮುಗಿಸುತ್ತೇವೆ ಎಂದು ಹೇಳಿ ಸಂದೇಶ್ ಮತ್ತು ಮಣಿಕಂಠ ಉತ್ಸವದಲ್ಲಿ ಸೇರಿಕೊಂಡು ಹೊರಟು ಹೋದರು. ದಿನಾಂಕ:09.07.2023 ರಂದು ಮಧ್ಯಾಹ್ನ 4.00 ಗಂಟೆಗೆ ಪಿರ್ಯಾದಿ ರಾಮಾನುಜಂ ಮತ್ತು ವೇಣುಗೋಪಾಲ ಶಾಮಿಯಾನ ಅಂಗಡಿ ಬಳಿ ಉತ್ಸವಕ್ಕೆ ಬಾಡಿಗೆಗೆ ತಂದಿದ್ದ ವಸ್ತುಗಳನ್ನು ಹಿಂತಿರುಗಿಸುತ್ತಿದ್ದಾಗ ಅಲ್ಲಿಗೆ ಬಂದ ಮಣಿಕಂಠ @ ಕೂಳೆ ಮಣಿ, ಅನಿಲ, ಶಂಕರ @ ತುಪ್ಪ, ಸಂದೇಶ್ ರವರುಗಳು ನಿನ್ನೆ ಉತ್ಸವದ ಸಮಯದಲ್ಲಿ ದೇವಾಲಯದ ಆವರಣಕ್ಕೆ ಬೈಕ್ ಬಿಡದೇ ಇರುವ ವಿಚಾರಗಳನ್ನು ತೆಗೆದು ವೇಣುಗೋಪಾಲನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಿಡಿದು ಎಳೆದಾಡಿ ಬಟ್ಟೆಯನ್ನು ಹರಿದುಹಾಕಿ ತುಟಿಗೆ ರಕ್ತ ಬರುವಂತೆ ಎಲ್ಲರೂ ಸೇರಿ ಹೊಡೆದಿದ್ದು, ಅಷ್ಟರಲ್ಲಿ ಅದೇ ಮಾರ್ಗವಾಗಿ ಪೋಲೀಸ್ ವಾಹನ ಹೋಗಿದ್ದು ಎಲ್ಲರೂ ಹೊರಟು ಹೋಗಿರುತ್ತಾರೆ. ರಾತ್ರಿ 8.15 ಗಂಟೆ ಸಮಯದಲ್ಲಿ ರಾಮಾನುಜಂ, ವೇಣುಗೋಪಾಲ್, ಸಂಜಯ್ ಅವರ ಮನೆ ಬಳಿ ಇದ್ದಾಗ, ಮಣಿಕಂಠ ಎಂಬುವನು ವೇಣುಗೋಪಾಲನಿಗೆ ಪೋನ್ ಕರೆ ಮಾಡಿ ಮಾತನಾಡಬೇಕು ಸರ್ವೀಸ್ ಸ್ಟೇಷನ್ ಬಳಿ ಬಾ, ಬಾರದೇ ಇದ್ದರೆ ನಾವುಗಳೇ ನಿಮ್ಮ ಮನೆಯ ಬಳಿ ಬಂದು ಗಲಾಟೆ ಮಾಡುವುದಾಗಿ ಹೇಳಿದ್ದು, ಫೈರ್ ಸ್ಟೇಷನ್ ಮುಂಭಾಗ ಹೋಗುತ್ತಿದ್ದಂತೆ ಮಣಿಕಂಠ, ಅನಿಲ್, ಮಂಜು, ಶಂಕರ, ಹ್ಯಾರಿಸ್, ಸಂದೇಶ್ ಒಟ್ಟಾಗಿ ಗುಂಪುಕಟ್ಟಿಕೊಂಡು ಕೈಗಳಲ್ಲಿ

ಮಾರಕಾಸ್ತ್ರ ಹಿಡಿದು ಹೊಡೆಯಲಾರಂಬಿಸಿದ್ದು, ಅನಿಲ್ ಗಾಜಿನ ಬಾಟಲ್‌ನಿಂದ ಮುಖ ಮತ್ತು ತಲೆಗೆ ಹೊಡೆದಿದ್ದು, ಶಂಕರ್ ಚಾಕುವಿನಿಂದ ಹೊಟ್ಟೆಗೆ ಚುಚ್ಚಿರುತ್ತಾನೆ. ಹ್ಯಾರಿಸ್ ಮತ್ತು ಮಂಜು ಗಾಜಿನ ಬಾಟಲಿನ ಚೂರುಗಳಿಂದ ಹೊಡೆದು ನಾವು ಜಗಳ ಬಿಡಿಸಲು ಪ್ರಯತ್ನಿಸಿದ್ದು ರಕ್ತಸ್ರಾವದಿಂದ ಬಿದ್ದಿದ್ದ ವೇಣುಗೋಪಾಲನನ್ನು ಉಪಚರಿಸಿ ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ" ಎಂಬುದಾಗಿ ನೀಡಿದ ದೂರಿನ ಮೇರೆಗೆ ಟಿ.ನರಸೀಪುರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 173/2023 ಕಲಂ 143, 147, 148, 504, 307, 302 ರೆ/ವಿ 149 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ. ನಂತರ ಪೊಲೀಸ್ ಅಧೀಕ್ಷಕರು ಮೈಸೂರು ಜಿಲ್ಲೆ ಮತ್ತು ಪೊಲೀಸ್ ಉಪಮಹಾನಿರೀಕ್ಷಕರು, ದಕ್ಷಿಣ ವಲಯ ಮೈಸೂರು ರವರು ಕೂಡಲೇ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ.

ದಿನಾಂಕ:10.07.2023 ರಂದು ಮೈಸೂರಿನ ಸರ್ಕಾರಿ ಮೆಡಿಕಲ್ ಶವಗಾರದಲ್ಲಿ ಮೃತ ವೇಣುಗೋಪಾಲ್ ರವರ ವೈದ್ಯಕೀಯ ಮರಣೋತ್ತರ ಶವಪರೀಕ್ಷೆ ನಡೆದಿದ್ದು, ನಂತರ ಮೃತ ದೇಹವನ್ನು ಅಂತ್ಯಸಂಸ್ಕಾರಕ್ಕಾಗಿ ಟಿ.ನರಸೀಪುರಕ್ಕೆ ತೆಗೆದುಕೊಂಡು ಹೋಗಿದ್ದು, ಅಂತ್ಯಸಂಸ್ಕಾರವು ಶಾಂತಿಯುತವಾಗಿ ಮುಗಿದಿರುತ್ತದೆ. ಈ ಸಮಯದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಈ ಪ್ರಕರಣದಲ್ಲಿ ಈಗಾಗಲೇ ಈ ಕೆಳಕಂಡ 06 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. (1) ಮಣಿಕಂಠಸ್ವಾಮಿ @ ಮಣಿ @ ಕೂಳೆ ಮಣಿ ಬಿನ್ ಸಿದ್ದಪ್ಪ, (2) ಸಂದೇಶ ಕುಮಾರ್ ಬಿನ್ ಸ್ವಾಮಿನಾಥನ್, (3) ಅನಿಲ್ ಬಿನ್ ಲೇಟ್.ಮಹದೇವ, (4) ಶಂಕರ @ ಶಂಕರೇಗೌಡ @ ತುಪ್ಪ ಬಿನ್ ಮಹದೇವಪ್ಪ, (5) ಮಂಜು @ ಮಂಜುನಾಥ್ ಬಿನ್ ಪುಟ್ಟಸ್ವಾಮಿ, (6) ಹ್ಯಾರಿಸ್ @ ಮಹಮದ್ ಹ್ಯಾರಿಸ್ ಬಿನ್ ಸರ್ತಾಜ್ ಪಾಷ ರವರುಗಳನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಲಾಗಿದ್ದು, ಮುಂದಿನ ತನಿಖೆ ಕೈಗೊಳ್ಳಲಾಗಿರುತ್ತದೆ.

ಈ ಘಟನೆಯು ವೈಯಕ್ತಿಕ ವಿಚಾರಗಳಿಗಾಗಿ ನಡೆದಿದ್ದು, ಮೃತ ವೇಣುಗೋಪಾಲ ಮತ್ತು ಆರೋಪಿಗಳು ಪರಿಚಿತರಾಗಿದ್ದು ಪರಸ್ಪರ ಒಡನಾಟದಿಂದ ಇದ್ದವರಾಗಿದ್ದು, ಕ್ಷುಲ್ಲಕ ಕಾರಣಕ್ಕಾಗಿ ಹಠಾತ್ತನೆ ಜಗಳ ಪ್ರಾರಂಭವಾಗಿದ್ದು ಪರಸ್ಪರ ಹೊಡೆದಾಟದಿಂದ ಈ ಘಟನೆ ಸಂಭವಿಸಿರುತ್ತದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುತ್ತದೆ.

ಟಿ.ನರಸೀಪುರ ಪಟ್ಟಣದಲ್ಲಿ ಹಾಲಿ ಶಾಂತ ಪರಿಸ್ಥಿತಿ ಇದ್ದು, ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳ ಗಸ್ತು ಮತ್ತು ಪಿಕೆಟಿಂಗ್ ಹಾಗೂ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮುಂದುವರೆಸಲಾಗಿದೆ.

---

HD 15 SDN 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು